# <u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>

<u>ಎಸ್.ಸಿ. ಸಂಖ್ಯೆ 93/2021</u>

| | | |
|---|---|---|
| ಸಾಕ್ಷಿದಾರರ ಹೆಸರು | : ರಾಫು | ಪಿಡಬ್ಲ್ಯೂ : 14 |
| ತಂದೆಯ / ಗಂಡನ ಹೆಸರು | : ಶಿವಣ್ಣ | ಸಿಡಬ್ಲ್ಯೂ : 24 |
| ವಯಸ್ಸು | : 24 ವರ್ಷ | |
| ಉದ್ಯೋಗ | : ಆ್ಯಂಬುಲೆನ್ಸ್ ಚಾಲಕ | |
| ವಾಸಸ್ಥಳ | : ಬೆಲವತ್ತ ಮಂಟಿ , ಮೈಸೂರು | |

**<u>ಸಾಕ್ಷಿಯನ್ನು ಈ ದಿನ ದಿಃ 12.12.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u>

1. ನಾನು ಸಹಿ ಹಾಕುತ್ತೇನೆ. ಈಗ ತೋರಿಸಿದ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ. ಅದು ದಿಃ 10.02.2021 ರಂದು ಮಾಡಿದ ಅಮಾನತ್ತು ಮಹಜರ್ ಆಗಿದ್ದು ಅದನ್ನು ನಿಪಿ 39 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ 39(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಸದರಿ ಸಹಿಯನ್ನು ನಾನು ದಿಃ 10.02.2021 ರಂದು ಮಾಡಿರುತ್ತೇನೆ. ಆ ದಿನ ಎನ್ ಆರ್ ಪೋಲೀಸರು ನನಗೆ ಕುರಿ ಮಂಡೆಯಲ್ಲಿರುವ ಆರೋಪಿ ವಿನಯ್ ನ ಮನೆಯ ಬಳಿಗೆ ಬರಲು ತಿಳಿಸಿದ್ದರು. ಆಗ ನಾನು ಮತ್ತು ಚಾ,ಸಾ. 25 ಬೆಳಿಗ್ಗೆ 12.30 ರ ಸಮಯಕ್ಕೆ ಆತನ ಮನೆಯ ಬಳಿಗೆ ಹೋದೆವು. ಅಲ್ಲಿಗೆ ಎನ್ ಆರ್ ಪೋಲೀಸ್ ಠಾಣೆಯ ಇನ್ಸ್ ಪೆಕ್ಟರ್ ಬಂದರು. ಅವರ ಜೊತೆ ಆರೋಪಿ ವಿನಯ್ ಕೂಡ ಇದ್ದ. ವಿನಯ್ ಮತ್ತು ಪೋಲೀಸರು ನಮ್ಮನ್ನು ಆ

ಮನೆಯ ಮೊದಲನೇ ಮಹಡಿಗೆ ಕರೆದುಕೊಂಡು ಹೋದರು. ಆ ಮನೆಯ ಒಳಗೆ ಹೋದಾಗ ಮೊದಲು ಒಂದು ಹಾಲ್ ಇತ್ತು. ಪಕ್ಕದಲ್ಲಿ ಒಂದು ರೂಂ ಇತ್ತು. ಆ ರೂಂನ ಸಜ್ಜಾದ ಮೇಲೆ ಇದ್ದಂತಹ ಒಂದು ಚಾಕು, ಬೆಲ್ಟ್ ಮತ್ತು ಟವೆಲ್ ನ್ನು ವಿನಯ್ ತೋರಿಸಿದ. ಅವುಗಳಿಂದ ಕೊಲೆ ಮಾಡಿದ್ದೇನೆ ಎಂದು ಹೇಳಿದ. ಪೋಲೀಸರು ಅವುಗಳನ್ನು ತೆಗೆದುಕೊಂಡು ಅಲ್ಲಿ ಮಹಜರ್ ಮಾಡಿದರು. ನಂತರ ನಮ್ಮ ಸಹಿಯನ್ನು ಪಡೆದರು. ಆ ವಸ್ತುಗಳನ್ನು ಒಂದು ಬಿಳಿಯ ಬ್ಯಾಗ್ ನಲ್ಲಿ ಹಾಕಿ, ಸೀಲು ಮಾಡಿ ಕಟ್ಟಿದರು. ಆ ಸಮಯದಲ್ಲಿ ಪೋಟೋಗಳನ್ನು ಸಹ ತೆಗೆದರು. ಈಗ ತೋರಿಸುತ್ತಿರುವ ಪೋಟೋಗಳಲ್ಲಿ ನಾನು ಮತ್ತು ಚಾ,ಸಾ. 25 ಹಾಗೂ ಆರೋಪಿ ವಿನಯ್ ಇದ್ದೇವೆ. ಅವು ಒಟ್ಟು 4 ಪೋಟೋಗಳಿದ್ದು ಅವುಗಳನ್ನು ನಿಪಿ 40 ರಿಂದ 43 ಎಂದು ಗುರುತುಪಡಿಸಿಕೊಳ್ಳಲಾಯಿತು. ಸದರಿ ವಸ್ತುಗಳನ್ನು ಈಗ ನೋಡಿದರೆ ಗುರುತಿಸುತ್ತೇನೆ. ಈಗ ತೆರೆದ ನ್ಯಾಯಾಲಯದಲ್ಲಿ ಸೀಲು ಮಾಡಿದ್ದಂತಹ ಬಟ್ಟೆಯ ಪ್ರತ್ಯೇಕ ಬ್ಯಾಗ್ ಗಳಿಂದ ಒಂದು ಚಾಕು, ಒಂದು ಬಿಳಿಯ ಟವೆಲ್, ಒಂದು ಬಿಳಿ ಮತ್ತು ಕೇಸರಿ ಬಣ್ಣ ಮಿಶ್ರಿತ ಟವೆಲ್ ಹಾಗೂ ಒಂದು ಕಪ್ಪು ಬೆಲ್ಟ್ ನ್ನು ಹೊರ ತೆಗೆದು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿರುತ್ತಾರೆ. ಚಾಕನ್ನು ಎಂ ಒ 13 ಎಂತಲು , ಟವೆಲ್ ನ್ನು ಎಂ ಒ 14 ಎಂತಲು, ಕಪ್ಪು ಬೆಲ್ಟ್ ನ್ನು ಎಂ ಒ 15 ಎಂತಲು ಈಗ ಗುರುತುಪಡಿಸಿಕೊಳ್ಳಲಾಯಿತು.

2. ಸದರಿ ವಿನಯ್ ನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ , ನ್ಯಾಯಾಲಯದ ಮುಂದೆ ವಿಸಿ ಮೂಲಕ ಹಾಜರುಪಡಿಸಿದ ಆರೋಪಿ ವಿನಯ್ ನನ್ನು ನೋಡಿ ಗುರುತಿಸಿರುತ್ತಾರೆ.

3. ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

ಪಾಟೀ ಸವಾಲುಃ ಆರೋಪಿಗಳು ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**